(ಮತವೂ ಆಗಿತ್ತು) ಆದೀಶ ಬಂದು ನಮಸ್ಕಾರ ಮಾಡಿ ಗಾಬರಿಯಲ್ಲಿಯೇ ನಿಂತ. ತಾತನ ಸಲಹೆಗಳನ್ನು ಕೇಳಲು ಬಂದಿದ್ದ ನಾಕಾರು ಮಂದಿ ಜತೆ ಮಾತುಕತೆಯಾಡುತ್ತ 'ಕುಂದ್ರುತಮ್ಮ. ಯಾವೂರು?' ಎಂದು ಕೇಳುತ್ತಲೆ ಮುಖ ನೋಡಿ 'ನೀನು ಬಸವಪುರದ ಮಲ್ಲಿಕಾರ್ಜುನಪ್ಪನ ಮಗನಲ್ಲೇನು?' ಎಂದು ಕೇಳಿಬಿಟ್ಟ. ಆದೇಶನಿಗೆ ಹೋದ ಜೀವ ಬಂದಂತಾಗಿ 'ಹೌದು ತಾತ. ನಾನು ಆದೀಶ. ಅಪ್ಪನ ಜತೆ ಇಲ್ಲಿಗೆ ಬಾಳ ಸಲ ಬಂದಿದ್ದೀನಿ' ಎಂದ ಗಾಬರಿಬಿಟ್ಟು. 'ಬಾ ಬಾ, ಅಪ್ಪ-ಅಮ್ಮ, ಅಣ್ಣಂದಿರು ಬೇಶಾರೇನು? ಮತ್ತ ಯಜಮಾನ ಬರ್ಲಿಲ್ಲೇನು?' ಎಂದು ಕೈಹಿಡಿದು ಕೂಡಿಸಿದ. 'ಅಪ್ಪ ಬಂದಿಲ್ಲ ತಾತ. ನಾನೊಬ್ಬನೆ ನಡಕೊಂಡು ಬಂದಿದ್ದೀನಿ. ನಿನ್ನ ಜತೆ ಮಾತಾಡದಿತ್ತು' ಅಂದ. ತಾತ ಚೂರು ಗಾಬರಿಯಾಗಿ, 'ಮನ್ಯಾಗ ಸರಿಯಿಲ್ಲೇನು?' ಎಂದು ಕೇಳಿದ.

'ಬೇಶಿದ್ದಾರ ತಾತ! ನಿನ್ನ ಜತೆ ಮಾತಾಡಮಿ ಅಂತ ಬಂದೆ' ಆದೇಶ ಗಾಬರಿಯಾಗಿರಲಿಲ್ಲ.

'ಉಂಡುಬಿಡು. ಉಂಬತ್ತಾಯ್ತಲ್ಲ...?' ಎಂದು ತಾತ ಹೇಳುತ್ತಿದ್ದಂತೆ, 'ಜಳಕ ಮಾಡಿ ಉಂಡ ಬಂದೀನಿ' ಅಂದ.

'ನಡಕೊಂಡು ಬಂದೀನಂತಿದ್ದಿ. ನೀರು ತರ್ತೀನಿ ಕುಡಿಯಾಕ...' ಎಂದು ನೀರು ತರಿಸಿಕೊಟ್ಟ.

ನದಿ ಸೀಮೆಯ ಈ ಸರಹದ್ದಿನಲ್ಲಿ ನಾಕಾರು ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಜಮೀನ್ದಾರರಿದ್ದರು. ಅವರಿಗೆ ದೊಡ್ಡ ದೊಡ್ಡ ಮನೆಗಳಿದ್ದವು. ಕಲ್ಯಾಣಪುರದ ಶಿವಸಂಗಪ್ಪ, ಬಸವಪುರದ ಮಲ್ಲಿಕಾರ್ಜುನಪ್ಪ ಇಬ್ಬರು ಶ್ರೀಮಂತರು. ನಾಕಾರು ಹಳ್ಳಿಗಳಲ್ಲಿ ಬೆಟ್ಟದಂತೆ ಕಾಣುತ್ತಿದ್ದರು. ಇಬ್ಬರ ನಡುವೆ ಜಗಳ ತಿಕ್ಕಾಟಗಳಿರಲಿಲ್ಲ. ಸಮಾನ ಮನಸ್ಕರಾಗಿದ್ದರು. ಏಳೆಂಟು ತಿಂಗಳಿಂದ ಬಸವಪುರಕ್ಕೆ ಶಿವಸಂಗಪ್ಪನ ಮನೆ ಮಂದಿ ನಾಲ್ಕೂ ಬಂಡಿಗಳಲ್ಲಿ ಬಂದಿದ್ದರು. ಮಲ್ಲಿಕಾರ್ಜುನಪ್ಪನ ಹಿರೇಮಗನ ಮೊಮ್ಮಗಳ ನಾಮಕರಣವಿತ್ತು. ಅಂದು ಮನೆ ಮಂದಿ ಜತೆ ಶಿವಗೀತಳೂ ಬಂದಿದ್ದಳು. ಮಲ್ಲಿಕಾರ್ಜುನಪ್ಪನ ಕೊನೆಯ ಮಗ ಆದೀಶ ಮೊದಲ ಸಲ ಶಿವಗೀತಳನ್ನು ನೋಡಿದ್ದ. ಸಮೀಪದಿಂದ ನೋಡುತ್ತ ಮಾತನಾಡಿಸಿದ. ಆಕೆಯ ಬಗ್ಗೆ ತಿಳಿದುಕೊಂಡ. ಹೋಗುವಾಗ ಸಮಯ ಸಾಧಿಸಿಕೊಂಡು, 'ನಾನು ನಿನ್ನ ಮದುವೆ ಆಗ್ತೀನಿ. ನಿನ್ನ ಒಪ್ಪಿಗೆ ಐತೇನು ಹೇಳು!' ಎಂದಷ್ಟೇ ಹೇಳಿ ಹಿಂದಕ್ಕೆ ಸರಿದಿದ್ದ. ಶಿವಗೀತ ಅರಿವು ತಪ್ಪಿದಂತೆ ನಿಂತಳು!

ಅದಾಗಿ ಒಂದು ತಿಂಗಳ ನಂತರ ಕಲ್ಯಾಣಪುರದ ನಂದೀಶ್ವರ ಜಾತ್ರೆಗೆ ಬಸವಪುರದ ಮಲ್ಲಿಕಾರ್ಜುನಪ್ಪನ ಮನೆಮಂದಿಯನ್ನು ಶಿವಸಂಗಪ್ಪ ಸ್ವತಃ ಹೋಗಿ ಕರೆದು ಬಂದಿದ್ದ. ಅವರೂ ಮೂರು ನಾಲ್ಕು ಬಂಡಿಯಲ್ಲಿ ಜಾತ್ರೆಗೆ ಬಂದಿದ್ದರು. ಆದೀಶ ಖುಷಿಯಿಂದ ಬಂದಿದ್ದ. ಜಾತ್ರೆಯಲ್ಲಿ ತೇರು ಎಳೆದು, ನಂದೀಶನಿಗೆ ಪೂಜೆ ಸಲ್ಲಿಸುವಾಗಲೇ ಹೊತ್ತು ಮುಳುಗಿ ತಾಸೊತ್ತು ಮೇಲಾಗಿತ್ತು. ರಾತ್ರಿ ಎಲ್ಲರೂ ಊಟ ಮಾಡಿ ಆ ದಿನ ತಂಗಿಕೊಂಡರು. ಊರಲ್ಲಿ ಜಾತ್ರೆಯ ಗದ್ದಲವಿದ್ದಂತೆ ಶಿವಸಂಗಪ್ಪನ ಮನೆಯಲ್ಲಿಯೆ ಜಾಸ್ತಿ ಗದ್ದಲವಿತ್ತು. ಆದೀಶ ಎಲ್ಲರ ಗಮನಕ್ಕೆ ಬಂದಿದ್ದ. ರಾತ್ರಿಯಲ್ಲಿ ಮತ್ತೆ ಸಮಯ ಸಾಧಿಸಿ ಶಿವಗೀತಳನ್ನು ಸಮೀಪಿಸಿ 'ನಾನು ಮದುವೆ ಆಗ್ತೀನಿ ನಿನ್ನ. ನಿನ್ನ ಒಪ್ಪಿಗೆ ಐತೇನು ಹೇಳು' ಎಂದು ಕೇಳಿದ. ಈ ಸಲ ಶಿವಗೀತ ಆದೀಶನಿಂದ ಈ ಮಾತು ಬರುತ್ತದೆಂದು ಕಾಯ್ತಿದ್ದಳು. 'ಮನೆ ಮಂದಿ ಒಪ್ಪಿದ್ರ ನಾನು ಒಪ್ಪಿದಂಗ. ತಾತನನ್ನು, ಅಪ್ಪ (ಮಾವ) ನನ್ನು ಕೇಳು, ಶಿವಮಲ್ಲಯ್ಯ ತಾತನ ದಯೇ ಬೇಕು' ಎಂದಳು. ಆದೀಶನಿಗೆ ದಾರಿ ಸಿಕ್ಕಂತಾಯಿತ್ತು. ಜಾತ್ರೆ ಮುಗಿದ ಮರುವಾರವೇ ಆದೀಶ ತಾತನ ಮುಂದ ಹಾಜರಾಗಿ ವಿಷಯ ಹೇಳಿದ...

ಹೇಳಿಯೇ ನೀರು ಕುಡಿದ ಆದೀಶ 'ನಿನ್ನ ದಯೇ ಬೇಕು' ಎಂದು ತಾತನ ಪಾದಕ್ಕೆ ಹಣೆ ಹಚ್ಚಿ ಎದ್ದು ಕುಂತ. ತಾತ ಆದೀಶನ ತಲಿಮ್ಯಾಲೆ ಕೈಯಾಡಿಸಿ, 'ತಾಳ್ಮೆಯಿಂದ ಇರು ತಮ್ಮ. ಇದು ನಾಜೂಕಿನ ವಿಚಾರ ಐತೆ. ನಿನ್ಗ ಶಿವಗೀತಮ್ಮನ ಬಗ್ಗೆ ಗೊತ್ತದಲ್ಲ...?' ಕೇಳಿದ.

'ಗೊತ್ತದ ತಾತ' ಅಂದ.

ಶಿವಮಲ್ಲಯ್ಯ ತಾತ ಆದೀಶನನ್ನು ನೋಡುತ್ತ ಅನ್ಯಮನಸ್ಕನಾದ.

'ನಿನ್ನ ದಯಬೇಕು ತಾತ! ನಿನ್ನ ದಯ ಇದ್ರ ಆಗ್ತದಂ...ತ...'

'ಆದೀಶ, ಆತುರ ಅವಸರ ಮಾಡಬ್ಯಾಡ. ನನ್ಗ ನಿನ್ನ ದಿಟದ ನಿರ್ಧಾರ ಬೇಕು. ನಾಳೆ ಅವರಿವರ ಮಾತು ಕೇಳಿ ಮನ್ಸು ಬದಲಿಸಿ, ದಾರಿ ಬೇರೆಯಾದ್ರ...?'

'ನಿನ್ನ ಪಾದದಾಣೆ ತಾತ!' ಎಂದು ತಾತನ ಪಾದಗಳಲ್ಲಿ ಮತ್ತೆ ತಲೆಯಿಟ್ಟ.

'ನಿನ್ನ ಶಿವಗೀತಮ್ಮನ ಮದುವೆ ಬಸವನ



